# ದೇವರೊಂದಿಗೆ ಸಮಯ ಕಳೆಯುವದು

**ಮಕ್ಕಳೇ ಪ್ರಮುಖರು**



## ಸೆಪ್ಟೆಂಬರ್ 2020

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | 1 ಜ್ಞಾನೋಕ್ತಿಗಳು 16 ಓದಿರಿ ಮತ್ತು ಅದರ ವಿಷಯಗಳನ್ನು ಕಂಠಪಾಠ ಮಾಡಿರಿ. ಒಂದುವೇಳೆ ನೀವು ಚಿಕ್ಕವರಾಗಿದ್ದರೆ ಸಹಾಯ ಮಾಡುವಂತೆ ನಿಮ್ಮ ತಂದೆತಾಯಿಗಳಿಗೆ ಹೇಳಿರಿ. | 2 ನಿಮ್ಮ ಮನೆಯನ್ನು ಸೂಕ್ಷ್ಮವಾಗಿ ಗಮನಿಸಿರಿ ಮತ್ತು ನಿಮ್ಮ ಮನೆಯಲ್ಲಿರುವ 3 ಒಳ್ಳೆಯ ವಸ್ತುಗಳಿಗಾಗಿ ದೇವರಿಗೆ ಸ್ತೋತ್ರ ಮಾಡಿರಿ. | 3 ಎಫೆಸ 3:19-21 ಓದಿರಿ. ದೇವರು ಅವರನ್ನು ಕಾಯುತ್ತಾನೆಂಬ ಅವರ ನಂಬಿಕೆಗಾಗಿ ಮತ್ತು ಅವರು ಒದಗಿಸುವ ಸೌಕರ್ಯಗಳಿಗಾಗಿ ಕೃತಜ್ಞತೆ ಸಲ್ಲಿಸುತ್ತಾ ಪ್ರಾರ್ಥನೆ ಮಾಡಿರಿ. | 4 ನಿಮ್ಮತಂದೆತಾಯಿಗಳೊಂದಿಗೆ ಕೀರ್ತನೆ 103:13 ಓದಿರಿ ಮತ್ತು ನಿಮ್ಮ ಕುಟುಂಬಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸಿರಿ.  | 5 ದೇವರು ನಿಮಗೆ ಕೊಟ್ಟಿರುವ ಕುಟುಂಬದ ವಿಷಯವಾಗಿ 5 ಕಾರ್ಯಗಳನ್ನು ಆರಿಸಿಕೊಂಡು ಆತನಿಗೆ ಕೃತಜ್ಞತೆ ಸಲ್ಲಿಸಿರಿ. |
| 6 ರೋಮಾ 15:5 ಓದಿರಿ ಮತ್ತು ಮನೆಯಲ್ಲಿರುವ ಪ್ರತಿಯೊಬ್ಬರು ಸಮಾಧಾನದಿಂದ ಜೀವಿಸಲು ಮತ್ತು ಒಬ್ಬರಿಗೊಬ್ಬರು ಸಹಾಯ ಮಾಡಲು ಕೃಪೆಯನ್ನು ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. | 7 ಜ್ಞಾನೋಕ್ತಿಗಳು 22:6 ಕಂಠಪಾಠ ಮಾಡಿರಿ. | 8 ಕಳೆದ ವಾರ ನಿಮಗೆ ಹೆಚ್ಚು ತೊಂದರೆ ಕೊಟ್ಟ ವಿಷಯ ಯಾವುದೆಂದು ಯೋಚಿಸಿರಿ ಮತ್ತು ಅದಕ್ಕೆ ಪರಿಹಾರವನ್ನು ಆಲೋಚಿಸಿರಿ. | 9 ಕಳೆದ ವಾರ ನಿಮಗೆ ಹೆಚ್ಚು ತೊಂದರೆ ಕೊಟ್ಟ ವಿಷಯ ಯಾವುದೆಂದು ಯೋಚಿಸಿರಿ ಮತ್ತು ಅದಕ್ಕೆ ಪರಿಹಾರವನ್ನು ಆಲೋಚಿಸಿರಿ. | 10 ಕೆಲಸ ಮಾಡಲು ಹೊರಗೆ ಹೋಗುವ ನಿಮ್ಮ ಕುಟುಂಬದ ಸದಸ್ಯರನ್ನು ಕಾಪಾಡುವಂತೆ ದೇವರನ್ನು ಬೇಡಿಕೊಳ್ಳಿರಿ. | 11 ಕೀರ್ತನೆ 56:3 ಓದಿರಿ ಮತ್ತು ದೇವರು ನಿಮಗಿರುವ ಹೆದರಿಕೆಗಳನ್ನು ತೆಗೆದುಹಾಕುವಂತೆ ಪ್ರಾರ್ಥನೆ ಮಾಡಿರಿ. | 12 ನಿಮ್ಮ ದೇಶದಲ್ಲಿರುವ ಕೊರತೆಯನ್ನು ನೀಗಿಸುವಂತೆ ದೇವರನ್ನು ಬೇಡಿಕೊಳ್ಳಿರಿ. |
| 13 ದೇವರೊಂದಿಗೆ ಮೂರು ನಿಮಿಷ ಮೌನವಾಗಿ ಸಮಯವನ್ನು ಕಳೆಯಿರಿ ನಂತರ ಆತನಿಗೆ ಸ್ತುತಿ ಗೀತೆಯನ್ನು ಹಾಡಿರಿ. | 14 ಮಕ್ಕಳೇ ಪ್ರಮುಖರು ತಂಡದ ಸಿಬ್ಬಂದಿಗಳಿಗಾಗಿ ಪ್ರಾರ್ಥನೆ ಮಾಡಿರಿ. | 15 ಅರ್ಧ ದಿನ ಉಪವಾಸವಿದ್ದು (ಅಂದರೆ ಮುಂಜಾನೆ ಫಲಹಾರ ತಿನ್ನಬೇಡಿರಿ), ಪ್ರಾರ್ಥಿಸಿರಿ ಮತ್ತು ಸತ್ಯವೇದ ಓದಿರಿ. | 16 ನಿಮ್ಮ ಬಗ್ಗೆ ನಿಮಗಿಷ್ಟವಿರುವ ಐದು ವಿಷಯಗಳನ್ನು ಬರೆಯಿರಿ ಮತ್ತು ಅವುಗಳಿಗಾಗಿ ದೇವರಿಗೆ ಸ್ತೋತ್ರ ಹೇಳಿರಿ. | 17 ನಿಮ್ಮ ಪಟ್ಟಣದ ರಾಜಕೀಯ ನಾಯಕರಿಗಾಗಿ ಪ್ರಾರ್ಥನೆ ಮಾಡಿರಿ, ಪ್ರಾಮಾಣಿಕವಾಗಿ ಆಳ್ವಿಕೆ ಮಾಡಲು ಅವರಿಗೆ ಮಾರ್ಗದರ್ಶನ ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. | 18 ಕೋವಿಡ್ ನಿಮಿತ್ತವಾಗಿ ಯಾರಾದರು ಮಕ್ಕಳು ತಮ್ಮ ಕುಟುಂಬದ ಸದಸ್ಯರನ್ನು ಕಳೆದುಕೊಂಡಿದ್ದರೆ, ಅಂಥ ಕಷ್ಟದ ಪರಿಸ್ಥಿತಿಯಲ್ಲಿ ದೇವರು ಅವರಿಗೆ ಗುರಾಣಿಯಾಗಿರುವಂತೆ ಅವರಿಗಾಗಿ ಪ್ರಾರ್ಥನೆ ಮಾಡಿರಿ. | 19 ನಿಮ್ಮ ಸ್ನೇಹಿತರಲ್ಲಿ ಒಬ್ಬರನ್ನು ಅಥವಾ ಇಬ್ಬರನ್ನು ಕರೆದು, “ಇಂದು ನಾನು ನಿಮಗಾಗಿ ಪ್ರಾರ್ಥನೆ ಮಾಡಲೆ” ಎಂದು ಹೇಳಿರಿ. |
| 20 ನಿಮ್ಮ ತಂದೆತಾಯಿಗಳನ್ನು ಆಶೀರ್ವದಿಸಲು ನಿಮ್ಮ ಮಾತುಗಳನ್ನು ಉಪಯೋಗಿಸಿರಿ ಮತ್ತು ಮುಂಜಾನೆಯೇ ಅವರಿಗಾಗಿ ಪ್ರಾರ್ಥನೆ ಮಾಡಿರಿ. | 21 ಮಾರ್ಕ 11:24 ಓದಿರಿ ಮತ್ತು ಅದರಂತೆ ನಡೆದುಕೊಳ್ಳಿರಿ. ಒಂದುವೇಳೆ ನೀವು ದೇವರಿಂದ ಏನಾದರು ಬೇಡಿಕೊಂಡಿದ್ದರೆ ಆತನು ಅದನ್ನು ಖಂಡಿತವಾಗಿಯೂ ನೆರವೇರಿಸುವನೆಂದು ನಂಬಿರಿ. | 22 1ನೇ ದಿನ ನೀವು ಮಾಡಿದ ಕಾರ್ಯಗಳ ಸಾರಾಂಶವನ್ನು ನಿಮ್ಮ ಸ್ನೇಹಿತರಿಗೆ ಮೆಸೇಜ್ ಮಾಡಿರಿ. | 23 ಇಂದು ನಿಮ್ಮನ್ನು ಖುಷಿಪಡಿಸಿದ ವಿಷಯಗಳನ್ನು ದೇವರಿಗೆ ಹೇಳಿರಿ. | 24 ದೇವರಿಗೆ ನಿಮ್ಮ ಮೇಲಿರುವ ಪ್ರೀತಿಯನ್ನು ನಿಮಗೆ ಜ್ಞಾಪಕಪಡಿಸುವ ವಿಷಯ ಏನಾದರು ಇದ್ದರೆ ಅದನ್ನು ಬರೆದು ಅಥವಾ ಅದರ ಚಿತ್ರ ಬಿಡಿಸಿ ನಿಮ್ಮ ಕೋಣೆಯೊಳಗೆ ಅಂಟಿಸಿರಿ. | 25 ಶುಕ್ರವಾರ - ಕಷ್ಟವಾದರೂ ದೇವರಿಗೆ ಮೆಚ್ಚಿಕೆಯಾಗುವ ಕಾರ್ಯಗಳನ್ನು ಮಾಡಲು ನಿನ್ನ ಬಲವನ್ನು ಕೊಡು ಎಂದು ಆತನನ್ನು ಬೇಡಿಕೊಳ್ಳಿರಿ. | 26 ಶನಿವಾರ - ನಿಮ್ಮ ತಂದೆತಾಯಿಗಳಿಗೆ ಇಷ್ಟವಾಗದ ಯಾವುದಾದರು ಕಾರ್ಯ ನೀವು ಮಾಡಿರುವದಾದರೆ ಅದರ ಬಗ್ಗೆ ಯೋಚಿಸಿರಿ ಮತ್ತು ನಿಮ್ಮನ್ನು ಸರಿಪಡಿಸಿಕೊಳ್ಳಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. |
| 27 ನಿಮಗೆ ಅಥವಾ ನಿಮ್ಮ ತಂದೆತಾಯಿಗಳ ಚಿಂತೆಗೆ ಕಾರಣವಾಗಿರುವ ವಿಷಯದ ಬಗ್ಗೆ ದೇವರೊಂದಿಗೆ ಮಾತನಾಡಿರಿ. | 28 ಈ ವಾರದಲ್ಲಿ ಸತ್ಯವೇದವನ್ನು ಓದಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. ಒಂದುವೇಳೆ ನೀವು ಚಿಕ್ಕವರಾಗಿದ್ದರೆ ನಿಮಗೆ ಸಹಾಯ ಮಾಡುವಂತೆ ನಿಮ್ಮ ತಂದೆತಾಯಿಗಳಿಗೆ ಹೇಳಿರಿ. | 29 ಧ್ಯಾನದ ಸಮಯದಲ್ಲಿ, ನಿಮಗೆ ಬಹಳ ಇಷ್ಟವಾದ ಹಾಡು ಹಾಡಿರಿ ಮತ್ತು ಅದು ಯಾಕೆ ಇಷ್ಟ ಎಂಬದಾಗಿಯೂ ವಿವರಿಸಿರಿ. | 30 ಕಳೆದ ಕೆಲವು ದಿನಗಳಿಂದ ನಿಮಗೆ ಆಗುತ್ತಿರುವ ಅನುಭವಗಳನ್ನು ವಿವರಿಸುತ್ತಾ ದೇವರಿಗೆ ಪತ್ರವನ್ನು ಬರೆಯಿರಿ. | | | |

ಸೋತವನಿಗೆ ತ್ರಾಣವನ್ನು ಅನುಗ್ರಹಿಸಿ,
ನಿರ್ಬಲನಿಗೆ ಬಹುಬಲವನ್ನು
ದಯಪಾಲಿಸುತ್ತಾನೆ.
ಯೆಶಾಯ 40:29

